THE MYSORE LEGISLATIVE ASSEMBLY

SIXTY-EIGHTH DAY.

Saturday, the 2nd September 1961.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (Sri S. R. KANTHI, B.A., LL.B.) in the Chair.

STARRED QUESTIONS

(to which oral answers were given)

STARTING OF AUXILIARY MIDWIVES AND NURSE TRAINING COURSES IN CHITRADURGA DISTRICT GOVERNMENT HOSPITAL.

*Q.—850. Sri G. SIVAPPA (Chitradurga).—

Will the Government be pleased to state :—

(*a*) whether there are proposals to start auxiliary Midwives and Nurse training courses in Chitradurga District Government Hospital ;

(*b*) whether they intend to sanction those proposals ;

(*c*) whether it has come to the notice that the Chitradurga District Hospital is well equipped and best suited to start these two training courses ?

*A.—Dr. K. K. HEGDE (Minister for Health).—

(*a*) Yes.

(*b*) The proposals are under consideration.

(*c*) Yes.

ಶ್ರೀ ಜಿ. ಶಿವಪ್ಪ.—ಚಿತ್ರದುರ್ಗ ಜಿಲ್ಲಾ ಸರಕಾರಿ ಆಸ್ಪತ್ರೆಯು ಆಗ್ಮಿಲರಿ ಮಿಡ್‌ವೈವ್ಸ್ ಮತ್ತು ನರ್ಸ್ ಟ್ರೇನಿಂಗ್ ಕೋರ್ಸಸ್ ಪ್ರಾರಂಭಿಸಲು ಎಲ್ಲಾ ದೃಷ್ಟಿಯಿಂದಲೂ ಅನುಕೂಲವಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ?

†ಡಾ. ಕೆ. ಕೆ. ಹೆಗ್ಡೆ.—ಎಲ್ಲ ಅನುಕೂಲತೆ ಇರುವಾಗ್ಗೆ ಅಂಥಾದ್ದು ಗಮನಕ್ಕೆ ಏಕೆ ಬರಲಿಕ್ಕಿಲ್ಲ?

ಶ್ರೀ ಜಿ. ಶಿವಪ್ಪ.—ಹಿಂದೆ ಮಿಡ್‌ವೈವ್ಸ್ ಕೋರ್ಸು ಈ ಆಸ್ಪತ್ರೆಯಲ್ಲಿ ಇತ್ತು, ಅದು ಈಗ ಬಂದಾಗಿದೆ. ಈ ಎರಡು ಕೋರ್ಸುಗಳಿಗೆ ಎಲ್ಲ ಅನುಕೂಲತೆ ಈ ಆಸ್ಪತ್ರೆಯಲ್ಲಿ ಇರುವುದರಿಂದ ಪುನಃ ಈ ಕೋರ್ಸನ್ನು ಪ್ರಾರಂಭಿಸುವುದಕ್ಕೆ ಸರಕಾರ ಪರ್ಯಾಲೋಚನೆ ಮಾಡುತ್ತಾ ಯೇ?

†Indicates that the remarks or speeches have not been revised by the Member concerned.

ಡಾ. ಕೆ. ಕೆ. ಹೆಗ್ಗಡೆ.—ನಲಹೆಗಳನ್ನು ಪರಿಶೀಲಸಲಾಗುತ್ತಿದೆ ಎಂದು ತಿಳಿಸಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಸ್ವಾಮಿ, ಈ ಆಗ್ಜಿಲರಿ ಮಿಡ್‌ವೈವ್ಸ್ ಅಂದರೆ ಏನು? ಅದರ ಅರ್ಥವೇನು? ಅವರಿಗೆ ಇರಬೇಕಾದ ಕ್ವಾಲಿಫಿಕೇಷನ್ಸ್ ಯಾವುದು? ಅವರ ಕರ್ತವ್ಯವೇನು? ಎಂಬುದನ್ನು ದಯವಿಟ್ಟು ಅಪ್ಪಣೆ ಕೊಡಿಸುತ್ತೀರಾ ?

ಡಾ. ಕೆ. ಕೆ. ಹೆಗ್ಗಡೆ.—ಮಿಡ್ ವೈವ್ಸ್ ಮತ್ತು ನರ್ಸೆಸ್ ಇವೆರಡರ ಮಧ್ಯೆಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಸ್ವಾಮಿ, ಇದೇನು ವಿಶ್ವಾಮಿತ್ರನ ಸೃಷ್ಟಿಯಾಗಿದೆಯೇ? ಅಧ್ಯಕ್ಷರು.— ಯಾವ ಸೃಷ್ಟಿಎಂಬುದನ್ನು ನೋಡೋಣ.

Dr. K. K. HEGDE.—We had midwifes before hand, but Government thought that the training they have is not sufficient and that they should have extra training. With that idea they have increased the training including nursing along with midwifery. Hereafter Government think of having only two categories namely auxiliary midwives and nurses and they want to give extra training to midwives in nursing also.

Sri J. B. MALLARADHYA.—What is exactly the function of the auxiliary midwives? Are they full-fledged midwives or 50 per cent midwives and 50 per cent nurses?

Dr. K. K. HEGDE.—Midwives *plus* extra training in nursing.

ಶ್ರೀ ಜಿ. ಎನ್. ಪುಟ್ಟಣ್ಣ.—ಇದರಲ್ಲಿರುವ ಆಗ್ಜಿಲರಿ ಮಿಡ್‌ವೈವ್ಸ್ ಮತ್ತು ನರ್ಸೆಸ್ ಈ ಸ್ಥಾನಗಳಿಗೆ direct recruitment ಮಾಡಲಾಗುವುದೇ ಅಥವಾ ನರ್ಸಿಸ್‌ನಲ್ಲಿರುವವರಿಗೆ ಕೊಡುತ್ತೀರಾ? ಅದನ್ನು ಹೇಗೆ ಕೊಡುತ್ತೀರಿ?

ಡಾ. ಕೆ. ಕೆ. ಹೆಗ್ಗಡೆ.—Direct recruitment ಮಾಡಲಾಗುವುದು.

ಶ್ರೀ ಜಿ. ಎನ್. ಪುಟ್ಟಣ್ಣ.—ಚಿತ್ರದುರ್ಗ ಸರಕಾರಿ ಆಸ್ಪತ್ರೆಯಲ್ಲಿ ನಿಂತುಕೊಳ್ಳಲು ಜಾಗಇಲ್ಲ. ಕೂತುಕೊಳ್ಳಲಿಕ್ಕೆ ಜಾಗಇಲ್ಲ. ಇಂಥಾ ಆಸ್ಪತ್ರೆಯಲ್ಲಿ ಎಲ್ಲಾ ಅನುಕೂಲತೆಯಿದೆ ಎಂದು ಶ್ರೀ ಶಿವಪ್ಪನವರು ಹೇಳುತ್ತಾರೆಂದು ಈ ಕೋರ್ಸಸ್ ಪ್ರಾರಂಭಮಾಡಬೇಕೆಂದಿದ್ದೀರಾ? ಈ ಕೋರ್ಸ್ ತೆಗೆದುಕೊಂಡವರಿಗೆ ಕ್ವಾಲಿಫಿಕೇಷನ್ಸ್ ಏನಿರಬೇಕು? ಸ್ಟೈಪೆಂಡ್ ಕೊಡುತ್ತೀರಾ?

ಡಾ. ಕೆ. ಕೆ. ಹೆಗ್ಗಡೆ.—ಶಿವಪ್ಪನವರು ಹೇಳಿದರು ಪುಟ್ಟಣ್ಣನವರು ಹೇಳಿದರು ಎಂದು ಮಾಡುವುದಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಇವರಿಗೆ ಸ್ಟೈಪೆಂಡ್ ಎಷ್ಟು ಕೊಡುತ್ತೀರಿ ; qualifications ಏನು course of training ಎಷ್ಟು ದಿವಸ ?

ಡಾ. ಕೆ. ಕೆ. ಹೆಗ್ಗಡೆ.—Qualifications ಮಿಡಲ್ ಸ್ಕೂಲ್ ಎಂದು ಇಟ್ಟುಕೊಂಡಿದ್ದೇವೆ ಸ್ಟೈಪೆಂಡ್ ವಿಷಯವನ್ನು I cannot tell you off-hand. If the Hon'ble Member wants details, I will furnish.

ಶ್ರೀ ಜಿ. ಎಸ್. ಪುಟ್ಟಣ್ಣ.—ಮಿಡಲ್ ಸ್ಕೂಲ್ ಎಂದರೆ ಮೊದಲನೆ ತರಗತಿಯೋ ನಾಲ್ಕನೆಯ ತರಗತಿಯೋ ಎಲ್ಲಿಯವರಿಗೆ ಓದಿರಬೇಕು ?

ಡಾ. ಕೆ. ಕೆ. ಹೆಗ್ಗಡೆ.—ಮಿಡಲ್‌ಸ್ಕೂಲಿನ ನಾಲ್ಕನೆಯ ತರಗತಿ ಅಥವಾ ಏಳನೆಯ ಸ್ಟಾಂಡರ್ಡ್ ಪಾಸ್ ಆಗಿರಬೇಕು.

Sri G. SIVAPPA.—These proposals have been made by the Department long long ago. Though Chitaldrug has got all the facilities for teaching, Government has not sanctioned this scheme. May I know the reason ?

Dr.K. K. HEGDE.—It is not a question of not sanctioning Sir. Nor does it depend upon the recommendation of Shri Sivappa. It is under departmental examination. For the in formation of the Hon'ble Member I may say that Government contemplate starting courses at Chitaldrug, K. G. F., Kolar, Tumkur, Hassan, Chikmagalur, Karwar and Malleswaram Hospital.

Sri G. SIVAPPA.—It need not be on my recommendation. Has not the Minister assured on many occasions that this hospital has got all the facilities and that we are going to sanction this scheme at Chitaldrug very early ?

Dr. K. K. HEGDE.—Even to-day I am saying that it is being taken up.

Sri B. S. SHANKARAPPA.—Is it not a fact that facilities were there in Chitaldrug and there was midwifery training at Chitaldrug hospital once ?

Dr. K. K. HEGDE.—It was there. But because the number of midwives were sufficient at the time, probably it was dropped.

ಶ್ರೀ ಜಿ. ಎಸ್. ಪುಟ್ಟಣ್ಣ.—ತುಮಕೂರಿನಲ್ಲಿ girls Hostel ಇದೆ. free boarding ಇದೆ.

Sri G. SIVAPPA.—Sir, my friend Mr. Puttanna is making unnecessary allegation against one place. This question comes up only with reference to Chitaldrug.

Sri G. N. PUTTANNA.—My question arises.....

Mr. SPEAKER.—There is some force in the argument of Sri G. sivappa because the question refers to Chitaldrug.

Sri G. N. PUTTANNA.—Now it arises. The Hon'ble Minister stated that he is starting training classes at Tumkur. I wanted to bring to the notice of the Government that there are free boarding facilities for all girls of all communites at Tumkur. Why don't you give preference to Tumkur ? That is the question I am asking. I am not making any allegation against Chitaldrug or Sri Sivappa. My object is, those who take these courses are very poor. They cannot afford expensive education. There is free boarding home for girls in Tumkur. Why not Government consider it first ? That is my request.

Dr. K. K. HEGDE.—Sri Puttanna has misunderstood. I do not say that Chitaldrug will be preference agaist Tumkur. All facilities will be examined before it is sanctioned.

Sri G. DUGGAPPA.—In Chitaldrug District hospital a number of beds are there and teaching staff and all other facilities for training of auxiliary midwives are there at present. In view of all these would the Government be pleased to start this training from 1961-62 ?

Dr. K. K. HEGDE.—Sir, I have already mentioned that it does not depend on the opinion of Sri Sivappa or Sri Puttanna. It depends upon facilities available at the place. The Department will examine these points and the question of training being started will be examined.

ಶ್ರೀ ಟಿ. ಹನುಮಯ್ಯ.— ೧೪ರ ಪೈಕಿ ಎಷ್ಟು ಕೈಗಳಲ್ಲಿರುವುದಕ್ಕಿಂತ ಚಿತ್ರದುರ್ಗ ಜಿಲ್ಲಾ ಎಸ್ಟೇಟ್‌ಯಲ್ಲಿ ಸಿಬ್ಬಂದಿ ಕಡಮೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಆ ವಿಚಾರ ಇದರಲ್ಲಿ ಬರುವುದಿಲ್ಲ.

INDUSTRIES OWNED AND RUN BY THE STATE GOVERNMENT.

*Q.—877. Sri A. M. Basave Gowda (Chickmagalur).—

Will the Government be pleased to state.—

(*a*) the industries that are owned by Government and run by them in the State;

(*b*) the number of them that are run under loss;

(*c*) the number of them that have made profits and the percentage of profit to the capital invested on them ?

A.—Sri B. D. Jatti (Chief Minister).—

(*a*) 1 Government Electric Factory Bangalore,
2 Mysore Implements Factory, Hassan,
3 Government Soap Factory Bangalore,
4 Central Industrial Workshop, Bangalore,
5 Government Porcelain Factory, Bangalore,
6 Government Silk Weaving Factory, Mysore
7 Government Sandalwood Oil Factories, Mysore and Shimoga,
8 Government Central Workshop, Mercara,
9 Government Spun Silk Mills, Channapatna,
10 Government Silk Filatures, Mysore,
11 Government Silk Filatures, Kollegal,
12 Government Silk Filatures, Kanakapura,
13 Mysore Iron and Steel Works, Bhadravati,
14 Kolar Gold Mining Undertakings.

(*b*) Six.

(*c*) Eight.

The percentage of profit varied from 4.9 per cent to 31 per cent during 1959-60.

Mr. Speaker.—Part of it has been answered.

ಶ್ರೀ ಎ. ಎಂ. ಬಸವೇಗೌಡ.—14 ಕೈಗಾರಿಕೆಗಳಲ್ಲಿ ಆರು ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿರುವುದಕ್ಕೆ ಕಾರಣವೇನು.